## ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.

## ಸಿ.ಸಿ.ಸಂಖ್ಯೆ.159/2020

| | | |
|---|---|---|
| ಫಿರ್ಯಾದುದಾರು: | | ದಿ. ಚೀಫ್ ಎಕ್ಸಿಕ್ಯೂಟೀವ್ ಆಫೀಸರ್,<br>ಪಿ.ಎ.ಸಿ.ಎಸ್ ಲಿ.,<br>ಶ್ರೀಮಂಗಲ ಶಾಖೆ, ಶ್ರೀಮಂಗಲ. |
| | | **---ವಿರುದ್ದ --** |
| ಆರೋಪಿ | : | ಶ್ರೀಮತಿ ಹೆಚ್.ಡಿ.ರುಕ್ಮಿಣಿ,<br>ಗಂಡಃ ಹೆಚ್.ಜಿ.ದೇವಯ್ಯ,<br>ವಾಸಃ ಬಿರುನಾಣಿ ಗ್ರಾಮ ಮತ್ತು ಅಂಚೆ,<br>ಶ್ರೀಮಂಗಲ ಹೋಬಳಿ,<br>ವಿರಾಜಪೇಟೆ ತಾಲ್ಲೂಕು, ಎಸ್.ಕೊಡಗು. |

### ಆರೋಪಿಯಾದ ನಿಮ್ಮ ವಿರುದ್ದ ಇರುವ ಆಪಾದನೆ ಏನೆಂದರೆ

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿ ಬ್ಯಾಂಕಿನ ಗ್ರಾಹಕರಾಗಿದ್ದು, ದಿಃ**20.03.2017,** ಆಭರಣ ಲೋನ್ ಯೋಜನೆ ಅಡಿಯಲ್ಲಿ ರೂ. **60,000/-** ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ನಿಗದಿತ ಸಮಯದಲ್ಲಿ ತೀರಿಸದೆ, ಸದರಿ ಸಾಲದ ಹಣವು ಬಡ್ಡಿ ಸಮೇತ ರೂ.**88,000/-** ಆಗಿದ್ದು, ನಂತರ ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಕಾವೇರಿ ಗ್ರಾಮೀಣ ಬ್ಯಾಂಕ್, ಶ್ರೀಮಂಗಲ ಶಾಖೆಯ **966415** ಸಂಖ್ಯೆಯ ಚೆಕ್ ಅನ್ನು ಸಾಲದ ಬಾದ್ಯತೆಗಾಗಿ ನೀಡಿದ್ದು, ನಂತರ ದಿಃ**27.01.2020** ರಂದು ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕಿಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕಿನವರು ದಿಃ**27.01.2020** ರಂದು "Funds Insufficient" ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ **15** ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿಃ**01.02.2020** ರಂದು ಕಾನೂನು ರೀತಿಯ ನೋಟೀಸನ್ನು ನೀಡಿದ್ದರೂ ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದುದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೀಯ ಲಿಖಿತಗಳ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ12.11.2025 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

**sd/-**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಪೊನ್ನಂಪೇಟೆ,**